## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 1487 / 2024

ಸಿಡಬ್ಲ್ಯೂ- **05**
ಪಿಡಬ್ಲ್ಯೂ-**05**

ದಿನಾಂಕಃ **03.04.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮಲ್ಲಯ್ಯ |
| ತಂದೆಯ/ಗಂಡನ ಹೆಸರುಃ | - | ಶರಣಪ್ಪ |
| ವಯಸ್ಸುಃ | -? | 24 ವರ್ಷ |
| ಉದ್ಯೋಗಃ | - | ಒಕ್ಕಲುತನ. |
| ವಾಸಸ್ಥಳಃ | - | ಯರಗೋಳ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಪೊಲೀಸರು ನನ್ನನ್ನು ಕರೆದು ವಿಚಾರಿಸಿರುವುದಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ನಾನು ಯಾದಗಿರಿಗೆ ಬಂದಾಗ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಪಘಾತ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಇರುವ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 5 ಮತ್ತು 6 ಎಂದು ಗುರುತಿಸಲಾಗಿರುತ್ತದೆ. ಯಾವ ಕಾರಣಕ್ಕಾಗಿ ನಿಪಿ 4 ರ ಮೇಲೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಯಿತು ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ದಾಖಲೆಯು ವಾಹನ ಜಪ್ತಿಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ನಿಪಿ 7 ನ್ನು ತಯಾರಿಸುವಾಗ ಪೋಟೋಗಳನ್ನು ತೆಗೆದಿರುತ್ತಾರೆ ಅವುಗಳನ್ನು ನಿಪಿ 8 ಮತ್ತು 9 ಎಂದು

ಗುರುತಿಸಲಾಯಿತು. ನಿಪಿ 7 ರ ಮೇಲೆ ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ. ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.)

ಪಾಟೀ ಸವಾಲುಃ ಸ.ಸ.ಅ. ರವರಿಂದಃ

ದಿನಾಂಕಃ 28.01.2024 ರಂದು ಬೆಳಗ್ಗೆ 9 ಗಂಟೆಯಿಂದ 10 ಗಂಟೆಯ ವರೇಗೆ ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಚಾಸಾ-6 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ನಿಪಿ 4 ರಂತೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ನ್ನು ತಯಾರಿಸುವಾಗ ನಿಪಿ 5 ಮತ್ತು 6 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 28.01.2024 ರಂದು ನನ್ನ ಹಾಗೂ ಚಾಸಾ 4 ರವರ ಸಮಕ್ಷಮ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆಯ ವರೇಗೆ ಪೊಲೀಸರು ನಿಪಿ 7 ರಂತೆ ವಾಹನ ಜಪ್ತಿ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ 7 ನ್ನು ತಯಾರಿಸುವಾಗ ನಿಪಿ 8 ಮತ್ತು 9 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 7 ರ ಪಂಚನಾಮೆಯ ಕಾಲಕ್ಕೆ ಪೊಲೀಸರು ಮೋಟಾರು ಸೈಕಲ್ ನಂಃ ಕೆಎ-33-ಇಬಿ-3184 ಹಾಗೂ ಕೆಎ-33-ಇಬಿ-9638 ನೇದ್ದವುಗಳನ್ನು ಪಂಚನಾಮೆಯ ಮೂಲಕ ಜಪ್ತಿಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ 4 ಮತ್ತು 7 ಇವುಗಳಿಗೆ ಸಕರಿಸಿದ್ದರು ಸಹ ಆರೋಪಿತನೊಂದಿಗೆ ರಾಜೀ ಮಾಡಿಕೊಂಡಿರುವ ಕಾರಣ ಅಭಿಯೋಜನೆಗೆ ವಿರುದ್ದವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ವಿ.ವಿ.ಕೆ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.